# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ಕಾರ್ಯಾಲಯ,

# ನಂಜನಗೂಡು

**ಸಿ.ಸಿ ನಂ.2656-2021** **ಪಿ. ಡಬ್ಲ್ಯು: 1**

| | |
|---|---|
| ಸಾಕ್ಷಿದಾರರ ಹೆಸರು<br>ವಾಸ್ತವ್ಯ | ಉಮೇಶ್ ಪ್ರಸಾದ್<br>ಇಮ್ಮಾವು ಗ್ರಾಮ, ನಂಜನಗೂಡು ತಾ. |
| | **ಸತ್ಯ ಪ್ರತಿಜ್ಞೆಯ** ಮೇರೆಗೆ **ದಿನಾಂಕ** 28-11-2022. |

**ಪಾಟೀ ಸವಾಲು: ಶ್ರೀ ಎಂ.ಆರ್ ವಕೀಲರಿಂದ:**

ನಾನು ನಂಜನಗೂಡು ತಾಲ್ಲೂಕಿನ ಇಮ್ಮಾವು ಗ್ರಾಮದ ವಾಸಿ. ನಾನು ವ್ಯವಸಾಯಗಾರ. ನಾನು ವ್ಯವಸಾಯಗಾರ ಎಂದು ತೋರಿಸಲು ನ್ಯಾಯಾಲಯಕ್ಕೆ ಯಾವುದೇ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ, ಆದರೆ ಹಾಜರುಪಡಿಸಲು ಸಿದ್ಧನಿರುತ್ತೇನೆ. ಆರೋಪಿ ನನಗೆ ಅವರ ಪತಿಯವರ ಮುಖೇನ ಪರಿಚಿತರು. ಆರೋಪಿ ಪತಿ ನನ್ನೊಂದಿಗೆ ಓಡಾಡಿಕೊಂಡಿದ್ದು, ಆಗಿನಿಂದ ಪರಿಚಿತರಾಗಿರುತ್ತಾರೆ. ಆರೋಪಿ ಪತಿ ಮತ್ತು ನನ್ನ ನಡುವೆ ಹಣಕಾಸಿನ ವ್ಯವಹಾರ ಇರುತ್ತದೆ ಎಂದರೆ ಸರಿಯಲ್ಲ. ಆರೋಪಿ ನನ್ನಿಂದ ಯಾವ ಉದ್ದೇಶಕ್ಕಾಗಿ ರೂ.1,84,000/- ಗಳನ್ನು ಸಾಲವಾಗಿ ಕೇಳಿದರು ಎಂಬುದರ ಬಗ್ಗೆ ನನಗೆ ಗೊತ್ತಿಲ್ಲ. ಆರೋಪಿ ಯಾವ ಉದ್ದೇಶಕ್ಕಾಗಿ ನನ್ನಿಂದ ಸಾಲ ಕೇಳಿದರು ಎಂದು ನಿಮ್ಮ ಪಿರ್ಯಾನಲ್ಲಾಗಲಿ, ನೋಟಿಸ್‌ನಲ್ಲಾಗಲಿ ನಮೂದು ಆಗಿದೆಯೇ ಎಂಬ ಪ್ರಶ್ನೆಗೆ ಸಾಕ್ಷಿ ನೋಡಬೇಕು ಎಂದು ನುಡಿಯುತ್ತಾರೆ. ನಾನು ಆರೋಪಿಗೆ ನಗದಾಗಿ ಹಣ ನೀಡಿರುತ್ತೇನೆ. ನಾನು ರವಿಚಂದ್ರ ರವರಿಗೆ ನನ್ನ ಖಾತೆ ಮುಖೇನ ರೂ.47,500/- ಗಳನ್ನು ಕಳುಹಿಸಿದ್ದು, ಅದನ್ನು ರವಿಚಂದ್ರ ರವರು ನನಗೆ ಹಿಂದಿರುಗಿಸಿರುತ್ತಾರೆ. ಸಾಕ್ಷಿ ಮುಂದುವರೆದು ನನ್ನಿಂದ ರೂ.1,84,000/- ಗಳನ್ನು ಸಾಲವಾಗಿ ಪಡೆದಿದ್ದು, ಸಾಲವನ್ನು ಹಿಂತಿರುಗಿಸುವಂತೆ ಕೇಳಿದಾಗ ಆರೋಪಿ ನನಗೆ ಚೆಕ್ ನೀಡಿದ್ದು, ಸದರಿ ಚೆಕ್ ಅನ್ನು ನಗದೀಕರಣಕ್ಕಾಗಿ ಸಲ್ಲಿಸಿದಾಗ ಅದು ಅಮಾನ್ಯಗೊಂಡ ಕಾರಣ ನಾನು ಆರೋಪಿಗೆ ನೋಟಿಸ್ ನೀಡಿರುತ್ತೇನೆ ಎಂದು ನುಡಿಯುತ್ತಾರೆ.

2. ನಾನು ಆರೋಪಿಯ ಪತಿಗೆ ರೂ.47,500/- ಗಳನ್ನು ಬ್ಯಾಂಕಿನ ಮುಖೇನ ವರ್ಗಾವಣೆ ಮಾಡಿದ್ದು, ಅದೇ ರೀತಿ ಆರೋಪಿಗೆ ನೀಡಿದ ಸಾಲವನ್ನು ಬ್ಯಾಂಕಿನ ಮುಖೇನ

ವರ್ಗಾವಣೆ ಮಾಡಲು ಏನಾರದೂ ತೊಂದರೆ ಇತ್ತೇ ಎಂಬ ಪ್ರಶ್ನೆಗೆ ಸಾಕ್ಷಿ ಆ ಸಮಯ ನನ್ನ ಬ್ಯಾಂಕಿನ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲದೇ ಕಾರಣ ಆರೋಪಿಗೆ ನಗದಾಗಿ ಹಣ ನೀಡಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಆರೋಪಿಗೆ ಹಣ ನೀಡಿದ ಸಮಯದಲ್ಲಿ ನನ್ನ ಬ್ಯಾಂಕಿನ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲದೇ ಇದ್ದ ಕಾರಣ ನನಗೆ ಆರೋಪಿಗೆ ರೂ.1,84,000/- ಗಳನ್ನು ಸಾಲವಾಗಿ ನೀಡುವ ಆರ್ಥಿಕ ಚೈತನ್ಯ ಇರಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾನು ಭತ್ತ ಮಾರಿ ಇಟ್ಟಿದ್ದ ಹಣದಿಂದ ಆರೋಪಿಗೆ ಸಾಲವಾಗಿ ನೀಡಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಆರೋಪಿಗೆ ಹಣ ನೀಡಿದ ಸಮಯದಲ್ಲಿ ಭತ್ತ ಬೆಳದಿದ್ದು, ಅದನ್ನು ಮಾರಿರುತ್ತೇನೆ ಎಂದು ತೋರಿಸಲು ಯಾವುದಾದರೂ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿ ಹಾಜರುಪಡಿಸಿರುವುದಿಲ್ಲ ಎಂದು, ಬೇಕಾದಲ್ಲಿ ಹಾಜರುಪಡಿಸಲು ಸಿದ್ಧನಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಭತ್ತ ಬೆಳದಿದ್ದ ಜಮೀನಿನ ಸರ್ವೆ ನಂಬರ್ ನನಗೆ ನೆನಪಿಲ್ಲ. ಸಾಕ್ಷಿ ಮುಂದುವರೆದು ಸದರಿ ಜಮೀನು ನನ್ನ ತಂದೆಯವರ ಹೆಸರಿನಲ್ಲಿ ಇರುತ್ತದೆ ಎಂದು ನುಡಿಯುತ್ತಾರೆ.

(ಮುಂದುವರಿದ ಪಾಟೀ ಸವಾಲಿಗೆ ಆರೋಪಿ ಪರ ವಕೀಲರು ಸಮಯವನ್ನು ಕೋರಿದ್ದು ಸಮಯಾವಕಾಶ ನೀಡಲಾಯಿತು)

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಸಹಿ/-**

**2 ನೇ ಕಿ.ಪ್ರ.ದ. ನ್ಯಾ ದಂ. ನಂಜನಗೂಡು**